| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 50 + 28 = 78 ]
Total No. of Questions : 50 + 28 = 78 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16
[ Total No. of Printed Pages : 16

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

ದಿನಾಂಕ : 08. 06. 2009 ]
ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ]
ಪರಮಾವಧಿ ಅಂಕಗಳು : 125 ]

[ Date : 08. 06. 2009
[ Time : 10-30 A.M. to 1-30 P.M.
[ Max. Marks : 125

**FOR OFFICE USE ONLY**

**PART – A**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 10. | | 19. | | 28. | | 37. | | 46. | |
| 2. | | 11. | | 20. | | 29. | | 38. | | 47. | |
| 3. | | 12. | | 21. | | 30. | | 39. | | 48. | |
| 4. | | 13. | | 22. | | 31. | | 40. | | 49. | |
| 5. | | 14. | | 23. | | 32. | | 41. | | 50. | |
| 6. | | 15. | | 24. | | 33. | | 42. | | ∞ | |
| 7. | | 16. | | 25. | | 34. | | 43. | | ∞ | |
| 8. | | 17. | | 26. | | 35. | | 44. | | ∞ | |
| 9. | | 18. | | 27. | | 36. | | 45. | | ∞ | |
| ***Total Marks of Part – A*** | | | | | | | | | | | |

**PART – B**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 51. | | 56. | | 61. | | 66. | | 71. | | 76. | |
| 52. | | 57. | | 62. | | 67. | | 72. | | 77. | |
| 53. | | 58. | | 63. | | 68. | | 73. | | 78. | |
| 54. | | 59. | | 64. | | 69. | | 74. | | ∞ | |
| 55. | | 60. | | 65. | | 70. | | 75. | | ∞ | |
| ***Total Marks of Part – B*** | | | | | | | | | | | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು **ಎರಡು** ವಿಭಾಗಗಳನ್ನು ಹೊಂದಿದೆ. ಅವು ಎ – **ವಿಭಾಗ** ಮತ್ತು ಬಿ – **ವಿಭಾಗ.**

ii) ಎ – **ವಿಭಾಗ** 50 ಪ್ರಶ್ನೆಗಳನ್ನು ಹೊಂದಿದೆ ಮತ್ತು ಬಿ – **ವಿಭಾಗ** 28 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಮಾಡಲಾಗಿದೆ.

iv) ಎ – **ವಿಭಾಗದಲ್ಲಿರುವ** ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿರುವ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ.

v) ಬಿ – **ವಿಭಾಗದ** ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ : $50 \times 1 = 50$

1. ನೈಲ್ ಮತ್ತು ಕ್ರಿಟಗಿರಿ ಪ್ರದೇಶಗಳಲ್ಲಿ ದೊರೆತ ಲಿಪಿ ಸಾಕ್ಷ್ಯಗಳು ಇದಕ್ಕೆ ಸಂಬಂಧಿಸಿವೆ :

(ಎ) ವಿಜ್ಞಾನ ಕಲೆಗೆ (ಬಿ) ಸಾಹಿತ್ಯ-ಚಿತ್ರಕಲೆಗೆ

(ಸಿ) ವ್ಯಾಪಾರ-ವ್ಯವಹಾರ ಲೆಕ್ಕಗಳಿಗೆ (ಡಿ) ಸಮಾಜ-ಸಾಹಿತ್ಯಕ್ಕೆ

*ಉತ್ತರ :* ____________________

2. ಭಾಷೆ ಇದ್ದೂ ಅದರ ಉಪಯೋಗವನ್ನು ಪಡೆದುಕೊಳ್ಳದ ಮಾನವ ಇದಕ್ಕೆ ಸಮಾನ :

(ಎ) ಜಂತುವಿಗೆ (ಬಿ) ಕಲ್ಲಿಗೆ

(ಸಿ) ಕುನ್ನಿಗೆ (ಡಿ) ಮರಕ್ಕೆ

*ಉತ್ತರ :* ____________________

3. ನಮ್ಮನ್ನು ಕಾಯುವ ನಗೆ

(ಎ) ಸರಸನಗೆ (ಬಿ) ಮುಗ್ಧನಗೆ

(ಸಿ) ರಸನಗೆ (ಡಿ) ಚುಚ್ಚುನಗೆ

*ಉತ್ತರ :* ____________________

4. ಬುದ್ಧನು ಅಂಗುಲಿಮಾಲನನ್ನು ನಡೆ ಎಂದಿರುವುದು

(ಎ) ಶಾಂತಿಯರಮನೆಗೆ (ಬಿ) ರಾಜನರಮನೆಗೆ

(ಸಿ) ಅಹಿಂಸೆಯರಮನೆಗೆ (ಡಿ) ಪ್ರೇಮದರಮನೆಗೆ

*ಉತ್ತರ :* ____________________

5. ಒಂದು ಬೆಳೆಯೋ ಚಿಗುರು; ಒಂದು ಉದುರೋ ಹಣ್ಣೆಲೆ – ಈ ವಾಕ್ಯದಲ್ಲಿ ಬೆಳೆಯೋ ಚಿಗುರು ಯಾರು ?

(ಎ) ಸಿದ್ದೇಗೌಡನ ಮಗ (ಬಿ) ಗೌರಿಯ ತಾಯಿ

(ಸಿ) ಸಾಕಿ (ಡಿ) ಕೆಂಪನ ಮಗ

*ಉತ್ತರ :* ____________________

6. ಎಚ್.ಜೆ. ಲಕ್ಕಪ್ಪ ಗೌಡರ ಜನ್ಮಸ್ಥಳ

(ಎ) ಚಾಮರಾಜನಗರ (ಬಿ) ಹಂಪಾಪುರ

(ಸಿ) ಕಬಕ (ಡಿ) ಮುಳಗುಂದ

*ಉತ್ತರ :* __________

7. ಜುಲ್ಮಾನೆ ವಿಧಿಸಿದ್ದರಿಂದ ಹೆಚ್ಚು ಸಂಕಟವಾದುದು ಯಾರಿಗೆ ?

(ಎ) ಪರಂಗಿ ಟೋಪಿಯವರಿಗೆ (ಬಿ) ಗ್ರಾಮಸ್ಥರಿಗೆ

(ಸಿ) ವೆಂಕಣ್ಣ ಮೇಷ್ಟ್ರಿಗೆ (ಡಿ) ಹೆಡ್‌ಮೇಷ್ಟ್ರು ವೆಂಕಟಸುಬ್ಬಯ್ಯನವರಿಗೆ

*ಉತ್ತರ :* __________

8. ಸೊಲ್ಲಾಪುರದಲ್ಲಿ ನಡೆದ 22ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು

(ಎ) ಪ್ರಭುಶಂಕರ (ಬಿ) ಡಿ.ವಿ. ಗುಂಡಪ್ಪ

(ಸಿ) ಎಂ.ಎಸ್. ಸುಂಕಾಪುರ (ಡಿ) ಎಂ.ಆರ್. ಶ್ರೀನಿವಾಸಮೂರ್ತಿ

*ಉತ್ತರ :* __________

9. ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳನ್ನು ಬರೆದ ಗ್ರೀಕ್ ಮಹಾಕವಿ

(ಎ) ಬರ್ನಾರ್ಡ್‌ಷಾ (ಬಿ) ಹೋಮರ್

(ಸಿ) ಗಿಬ್ಬನ್ (ಡಿ) ಟಾಲ್‌ಸ್ಟಾಯ್

*ಉತ್ತರ :* __________

10. ಮಂಜಪ್ಪನವರು ರಾಷ್ಟ್ರಸೇವೆಯ ಜೊತೆಗೆ ಆಯ್ದುಕೊಂಡ ಮತ್ತೊಂದು ವೃತ್ತಿ

(ಎ) ಪೊಲೀಸ್ (ಬಿ) ಡಾಕ್ಟರ್

(ಸಿ) ವಕೀಲ (ಡಿ) ಉಪಾಧ್ಯಾಯ

*ಉತ್ತರ :* __________

11. ಸತ್ಕಾರ್ಯದ ಮಹಾಪ್ರೇರಕ ಶಕ್ತಿ

(ಎ) ದೃಢ ವಿಶ್ವಾಸ (ಬಿ) ದೃಢ ನಿರ್ಧಾರ

(ಸಿ) ದೃಢ ನಿಷ್ಠೆ (ಡಿ) ದೃಢ ಸಂಕಲ್ಪ

*ಉತ್ತರ :* __________

12. ಒಳಗಿನ ಅಪಾರ ಶಕ್ತಿಯನ್ನು ಪರಿಮಿತಿಗೊಳಿಸಿ ನಮ್ಮನ್ನು ದುರ್ಬಲರನ್ನಾಗಿ ಮಾಡುವುದು

(ಎ) ನಮ್ಮ ಆಲೋಚನೆ (ಬಿ) ನಮ್ಮ ಸೋಮಾರಿತನ

(ಸಿ) ನಮ್ಮ ಸ್ನೇಹಿತರ ಸಹವಾಸ (ಡಿ) ಚಿಕ್ಕಂದಿನಿಂದ ಬಂದ ನಮ್ಮ ನಿಷೇಧಾತ್ಮಕ ಭಾವನೆ

*ಉತ್ತರ :* __________

13. ಏಷ್ಯಾ ಖಂಡದಲ್ಲೇ ಅತ್ಯಾಧುನಿಕ ''ಸೀಬರ್ಡ್ ನೌಕಾ ನೆಲೆ'' ಸಂಕೀರ್ಣ ಇರುವುದು

(ಎ) ದೆಹಲಿಯಲ್ಲಿ (ಬಿ) ಕಾರವಾರದಲ್ಲಿ

(ಸಿ) ಮಂಗಳೂರಿನಲ್ಲಿ (ಡಿ) ಚೆನ್ನೈನಲ್ಲಿ

*ಉತ್ತರ :* __________

14. ಎಚ್.ಕೆ. ಬಾಲಸೂರಿ ಅವರು ರಚಿಸಿರುವ ಗದ್ಯ ಭಾಗ

(ಎ) ನಮ್ಮ ಸೈನಿಕರು (ಬಿ) ನೆನಪಿನಂಗಳದಿಂದ

(ಸಿ) ತ್ಯಾಗಮಯಿ (ಡಿ) ಸಂಕಲ್ಪ

*ಉತ್ತರ :* __________

15. ಪಾಟಲೀಪುರಕ್ಕೆ ಬಂದ ಅಮಾತ್ಯ ರಾಕ್ಷಸನು ಅವಿತುಕೊಂಡಿದ್ದ ಸ್ಥಳ

(ಎ) ದೇವಾಲಯ (ಬಿ) ವಸಂತವನ

(ಸಿ) ಅನ್ನಸತ್ರ (ಡಿ) ಆಶ್ರಮ

*ಉತ್ತರ :* __________

16. 'ನಾಶಕ್ಯಂ ಬುದ್ಧಿವಂತಃ ಪುರುಷಸ್ಯ' ಈ ಉಕ್ತಿಯನ್ನು ಉಲ್ಲೇಖಿಸಿದ್ದು

(ಎ) ಸಾಮಜ (ಬಿ) ಬಳ್ಳು

(ಸಿ) ಸಿಂಹ (ಡಿ) ಶಶಕ

*ಉತ್ತರ :* __________

17. ತಾಮ್ರ ತವರ ಕರಗಿ ಈ ರೂಪ ತಾಳಿದೆ :

(ಎ) ಪ್ರತಿಮೆ (ಬಿ) ಪಾತ್ರೆ

(ಸಿ) ಘಂಟೆ (ಡಿ) ಪೆಟ್ಟಿಗೆ

*ಉತ್ತರ :* __________

18. ಸೇಡಿಯಾಪು ಕೃಷ್ಣಭಟ್ಟರ ಈ ಕೃತಿಗೆ ಪಂಪ ಪ್ರಶಸ್ತಿ ದೊರಕಿದೆ :

(ಎ) ಪಳಮೆಗಳು (ಬಿ) ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು

(ಸಿ) ದೈವಲೀಲೆ (ಡಿ) ವಿಚಾರ ಪ್ರಪಂಚ

*ಉತ್ತರ :* __________

19. ಕಡುಪಾಪಿ ತೀರ್ಥಸ್ನಾನ ಮಾಡಿದರೆ ಇದರ ಸ್ನಾನದಂತೆ ವ್ಯರ್ಥವಾಗುತ್ತದೆ :

(ಎ) ಕಂಚಿನ ಪ್ರತಿಮೆ (ಬಿ) ಕಾಗೆ

(ಸಿ) ಹಿಮಬೆಟ್ಟ (ಡಿ) ಮಣ್ಣಿನ ಇಂಟೆ

*ಉತ್ತರ :* __________

20. ಭಾರತಮಾತೆಯ ಪಾದಮುಡಿಯನ್ನು ತೊಳೆಯುತ್ತಿರುವವಳು

(ಎ) ಗಂಗೆ ಮತ್ತು ತುಂಗೆ (ಬಿ) ತುಂಗೆ ಮತ್ತು ಯಮುನೆ

(ಸಿ) ಕಾವೇರಿ ಮತ್ತು ತುಂಗಭದ್ರಾ (ಡಿ) ಗಂಗೆ ಮತ್ತು ಕಾವೇರಿ

*ಉತ್ತರ :* __________

21. ಪರಮಾನ್ನಕ್ಕೆ ಇದು ಮುಖ್ಯವಾಗಿ ಬೇಕು :

(ಎ) ಗೊಡಂಬಿ (ಬಿ) ದ್ರಾಕ್ಷಿ

(ಸಿ) ಕೇಸರಿ (ಡಿ) ಬೆಲ್ಲ

*ಉತ್ತರ :* ______

22. ಸತ್ಯವಂತರ ಸಂಗವಿರಲು ಇದರ ಅವಶ್ಯಕತೆಯಿಲ್ಲ :

(ಎ) ಸ್ನಾನ (ಬಿ) ದಾನ್ಯ

(ಸಿ) ಯಜ್ಞ (ಡಿ) ತೀರ್ಥ

*ಉತ್ತರ :* ______

23. ಯಕ್ಷನ ರೂಪದಲ್ಲಿ ಬಂದವರು ಯಾರು ?

(ಎ) ಇಂದ್ರ (ಬಿ) ಯಮ

(ಸಿ) ಬ್ರಹ್ಮ (ಡಿ) ಶಿವ

*ಉತ್ತರ :* ______

24. ಲೋಕದಲ್ಲಿ ಬೆಲೆಯಾದುದು

(ಎ) ಮಣ್ಣು (ಬಿ) ಚಿನ್ನ

(ಸಿ) ಕಲ್ಲು (ಡಿ) ಬಳಗ

*ಉತ್ತರ :* ______

25. ಜನಪದರು ಬೆಳಗಾಗಿ ಎದ್ದು ನೆನೆಯುವುದು

(ಎ) ತಂದೆ–ತಾಯಿಯನ್ನು (ಬಿ) ಮನೆ–ಮಕ್ಕಳನ್ನು

(ಸಿ) ಭೂಮಿತಾಯಿಯನ್ನು (ಡಿ) ಬಂಧು–ಬಳಗವನ್ನು

*ಉತ್ತರ :* ______

26. ಈಳೆ, ನಿಂಬೆ, ಮಾವು, ಮಾದಲಕ್ಕೆ ಇರುವ ಗುಣ

(ಎ) ಹುಳಿ (ಬಿ) ಸಿಹಿ

(ಸಿ) ಒಗರ (ಡಿ) ಪರಿಮಳ

*ಉತ್ತರ :* ______

27. ಶರಣೆ ಅಕ್ಕಮಹಾದೇವಿಯ ಅಂಕಿತನಾಮ

(ಎ) ಕೂಡಲಸಂಗಮದೇವ (ಬಿ) ಹರಹರಾಶ್ರೀ ಚೆನ್ನಸೋಮೇಶ್ವರ

(ಸಿ) ಅಜಗಣ್ಣ (ಡಿ) ಚೆನ್ನಮಲ್ಲಿಕಾರ್ಜುನ

*ಉತ್ತರ :* ______

28. ಡಿ.ವಿ.ಜಿ. ಅವರ ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ :

(ಎ) ಉಮರನ ಒಸಗೆ (ಬಿ) ಮಂಕುತಿಮ್ಮನ ಕಗ್ಗ

(ಸಿ) ಶ್ರೀ ಮದ್ಭಗವದ್ಗೀತಾ ತಾತ್ಪರ್ಯ (ಡಿ) ಮರುಳ ಮುನಿಯನ ಕಗ್ಗ

*ಉತ್ತರ :* ____________________

29. 'ಈ ಜನರು ನಿಜದಿಂ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಹೀಗೆಂದ ಕವಿ

(ಎ) ಕಪ್ಪೆ ಅರಭಟ್ಟ (ಬಿ) ನೃಪತುಂಗ

(ಸಿ) ಪಂಪ (ಡಿ) ಲಕ್ಷ್ಮೀಧರಾಮಾತ್ಯ

*ಉತ್ತರ :* ____________________

30. ಲಕ್ಷ್ಮೀಧರಾಮಾತ್ಯನ ತಾಯಿ ಲೋಕೋಪಕಾರಿಯ ಕಾರ್ಯವನ್ನು ಮಾಡು ಎಂದು ಮಗನಿಗೆ ಉಸಿರಿದ್ದು ಈ ಸಂದರ್ಭದಲ್ಲಿ :

(ಎ) ಸ್ನಾನ ಮಾಡಿಸುವಾಗ (ಬಿ) ತಿಂಡಿ ತಿನಿಸುವಾಗ

(ಸಿ) ಹಾಲುಣಿಸುವಾಗ (ಡಿ) ನೀರು ಕುಡಿಸುವಾಗ

*ಉತ್ತರ :* ____________________

31. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳ ಸಂಖ್ಯೆ

(ಎ) ಆರು (ಬಿ) ಹತ್ತು

(ಸಿ) ಒಂಬತ್ತು (ಡಿ) ಏಳು

*ಉತ್ತರ :* ____________________

32. ನಿನ್ನ ತಿಂಡಿಯಲ್ಲಿ ನನಗೆ ಸ್ವಲ್ಪ ಕೊಡು – ಈ ವಾಕ್ಯದಲ್ಲಿರುವ ಪರಿಮಾಣ ವಾಚಕ ಪದ

(ಎ) ನನಗೆ (ಬಿ) ಕೊಡು

(ಸಿ) ಸ್ವಲ್ಪ (ಡಿ) ತಿಂಡಿಯಲ್ಲಿ

*ಉತ್ತರ :* ____________________

33. ಸರ್ವನಾಮಪದಕ್ಕೆ ಉದಾಹರಣೆ

(ಎ) ಸೀತೆ (ಬಿ) ಅವನು

(ಸಿ) ನದಿ (ಡಿ) ಪುಸ್ತಕ

*ಉತ್ತರ :* ____________________

34. 'ಮಾಡು' ಈ ಪದದ ನಿಷೇಧಾರ್ಥಕ ರೂಪ

(ಎ) ಮಾಡೆನು (ಬಿ) ಮಾಡುವುದು

(ಸಿ) ಮಾಡುವೆ (ಡಿ) ಮಾಡಿದೆನು

*ಉತ್ತರ :* ____________________

35. ಮೇಷ್ಟ್ರು ಪಂಚೆಯ ಸೆರಗಿನಿಂದ ಕಣ್ಣೊರೆಸಿದರು – ಈ ವಾಕ್ಯದಲ್ಲಿರುವ ತೃತೀಯಾ ವಿಭಕ್ತಿಯ ಪದ

(ಎ) ಸೆರಗಿನಿಂದ (ಬಿ) ಪಂಚೆಯ

(ಸಿ) ಕಣ್ಣೊರೆಸಿದರು (ಡಿ) ಮೇಷ್ಟ್ರು

*ಉತ್ತರ :* ____________________

36. 'ಬರಿಗನಸು' ಪದವು ಈ ಸಂಧಿಗೆ ಉದಾಹರಣೆಯಾಗಿದೆ :

(ಎ) ಲೋಪ ಸಂಧಿ (ಬಿ) ಆಗಮ ಸಂಧಿ

(ಸಿ) ಜಶ್ತ್ವ ಸಂಧಿ (ಡಿ) ಆದೇಶ ಸಂಧಿ

ಉತ್ತರ : ____________________

37. 'ಶಾಲ್ಯನ್ನ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :

(ಎ) ಲೋಪ ಸಂಧಿ (ಬಿ) ಯಣ್ ಸಂಧಿ

(ಸಿ) ಸವರ್ಣದೀರ್ಘ ಸಂಧಿ (ಡಿ) ಗುಣ ಸಂಧಿ

ಉತ್ತರ : ____________________

38. 'ಜಂಗಾಲು' ಪದವು ಈ ಭಾಷೆಯಿಂದ ಬಂದ ಪದ :

(ಎ) ಇಂಗ್ಲೀಷ್ (ಬಿ) ಪೋರ್ಚುಗೀಸ್

(ಸಿ) ಪರ್ಷಿಯನ್ (ಡಿ) ಉರ್ದು

ಉತ್ತರ : ____________________

39. 'ಬ್ಯಾಸಕಿ' ಪದದ ಗ್ರಾಂಥಿಕ ರೂಪ

(ಎ) ಬಿಸಿಲು (ಬಿ) ಬೇಸರ

(ಸಿ) ಬೇಸಿಗೆ (ಡಿ) ಬೆವರು

ಉತ್ತರ : ____________________

40. 'ಪ್ರಾಣ' ಈ ಪದದ ತದ್ಭವ ರೂಪ

(ಎ) ಪರುಣ (ಬಿ) ಪಾಣ

(ಸಿ) ಬರಣ (ಡಿ) ಹರಣ

ಉತ್ತರ : ____________________

41. ಅಂದು ಬೆಂಗಳೂರಿನ ಸುತ್ತಮುತ್ತ ಭೂಮಿಯು ಗಡಗಡನೆ ನಡುಗಿತು. ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ

(ಎ) ಗಡಗಡ (ಬಿ) ಸುತ್ತಮುತ್ತ

(ಸಿ) ನಡುಗಿತು (ಡಿ) ಭೂಮಿಯು

ಉತ್ತರ : ____________________

42. 'ಹೆಬ್ಬಂಡೆ' ಪದವು ಈ ಸಮಾಸಕ್ಕೆ ಉದಾಹರಣೆ :

(ಎ) ದ್ವಂದ್ವ (ಬಿ) ಕರ್ಮಧಾರಯ

(ಸಿ) ಅಂಶಿ (ಡಿ) ಕ್ರಿಯಾ

ಉತ್ತರ : ____________________

43. ಅಹಾ ಎಷ್ಟು ಸೊಗಸಾಗಿದೆ – ಈ ವಾಕ್ಯದಲ್ಲಿ ಬಳಸಬೇಕಾದ ಲೇಖನ ಚಿಹ್ನೆ

(ಎ) ಪ್ರಶ್ನಾರ್ಥಕ (ಬಿ) ವಿವರಣಾತ್ಮಕ

(ಸಿ) ಭಾವಸೂಚಕ (ಡಿ) ಅರ್ಧಾರ್ಧಮ್ಮಕ

ಉತ್ತರ : ____________________

44. ಹುಡುಗರು ಶಾಲೆಗೆ ಹೋದರು, ಆದರೆ ಅವರು ಅಲ್ಲಿ ಓದಲಿಲ್ಲ. – ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಸರಳ ವಾಕ್ಯ

*ಉತ್ತರ :* ______

45. 'ಕಪರ್ದಿ' ಈ ಪದದ ಅರ್ಥ

(ಎ) ಹಂದಿ (ಬಿ) ಜಿಂಕೆ

(ಸಿ) ಬೇಡ (ಡಿ) ಶಿವ

*ಉತ್ತರ :* ______

46. ದ್ವಿರುಕ್ತಿ ಪದಕ್ಕೆ ಉದಾಹರಣೆ

(ಎ) ಲಕಲಕ (ಬಿ) ಬೇಗಬೇಗ

(ಸಿ) ಸರಸರ (ಡಿ) ಬೆಟ್ಟಗುಡ್ಡ

*ಉತ್ತರ :* ______

47. ಆಟ – ಈ ಪದದ ವ್ಯಾಕರಣ ವಿಶೇಷ

(ಎ) ತದ್ಧಿತಾಂತ ನಾಮ (ಬಿ) ಕೃದಂತ ನಾಮ

(ಸಿ) ಕೃದಂತಾವ್ಯಯ (ಡಿ) ಕೃದಂತ ಭಾವನಾಮ

*ಉತ್ತರ :* ______

48. 'ಹಣವಂತ' ಎನ್ನುವುದು ಒಂದು

(ಎ) ತದ್ಧಿತಾಂತ ಭಾವನಾಮ (ಬಿ) ತದ್ಧಿತಾಂತ ನಾಮ

(ಸಿ) ಕೃದಂತ ನಾಮ (ಡಿ) ತದ್ಧಿತಾಂತ ಅವ್ಯಯ

*ಉತ್ತರ :* ______

49. 'ಹೃದಯ ಶಾರದೆ' ಇಲ್ಲಿರುವ ಅಲಂಕಾರ

(ಎ) ರೂಪಕಾ (ಬಿ) ಉಪಮಾ

(ಸಿ) ದೃಷ್ಟಾಂತಾ (ಡಿ) ಉತ್ಪ್ರೇಕ್ಷಾ

*ಉತ್ತರ :* ______

50. 'ದಾರುಕ' ಪದವು ಈ ಗಣದಲ್ಲಿದೆ :

(ಎ) ಯ–ಗಣ (ಬಿ) ರ–ಗಣ

(ಸಿ) ಬ–ಗಣ (ಡಿ) ತ–ಗಣ

*ಉತ್ತರ :* ______

## ಬಿ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಎರಡೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $10 \times 2 = 20$

51. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು ?

52. ಅಂಗುಲಿಮಾಲ ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ ಏನೆಂದು ಅರಿಕೆ ಮಾಡಿಕೊಂಡನು ?

53. ಸಿದ್ದಪ್ಪನಿಗೆ ಮಗನ ಬಗೆಗೆ ಕೋಪ ಬಂದ ಸಂದರ್ಭವನ್ನು ವಿವರಿಸಿ.

54. ಮಂಜಪ್ಪ ಮತ್ತು ಗುಮಾಸ್ತರ ಸಂಭಾಷಣೆಯಲ್ಲಿ ಅಪಾಲಜಿ ಪ್ರಸಂಗವನ್ನು ತಿಳಿಸಿ.

55. ಯುದ್ಧಕ್ಕೆ ಕಾರಣಗಳು ಯಾವುವು ?

56. ಪಶುಲೋಮನು ಇಂದ್ರಾದಿ ದೇವತೆಗಳನ್ನು ಏನೆಂದು ಬೇಡಿಕೊಂಡನು ?

57. ಸೇಡಿಯಾಪು ಕೃಷ್ಣಭಟ್ಟರು ಭಾರತದ ಪ್ರಾದೇಶಿಕ ವಿಭಿನ್ನತೆಯನ್ನು ಹೇಗೆ ವಿವರಿಸಿದ್ದಾರೆ ?

58. ಸತಿ, ಸ್ನೇಹ, ಬಯಕೆಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು ?

59. ಯಾರಲ್ಲಿ ಶೌರ್ಯವನ್ನು ತೋರಿಸು ಎಂದು ಅರ್ಜುನನು ಶಬರನಿಗೆ ಹೇಳಿದ ?

60. ಮುಕ್ತಾಯಕ್ಕ ಯಾವುದನ್ನು ಮಹಾಜ್ಞಾನದಾಚರಣೆ ಎಂದಿದ್ದಾಳೆ ?

ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $8 \times 2 = 16$

61. ''ನಿಂತೆ ಇರುವೆನು ನಾನು, ನೀನಿನ್ನೂ ನಿಂತಿಲ್ಲ.''

62. ''ಏಳರಾಟ ಶನಿ ಹೊಡೆದು ಅಪ್ಪಳಿಸುತ್ತಿದೆ''!

63. ಒಂದು ಒಳ್ಳೆಯ ಯೋಚನೆ ಮಾಡಿ, ಅದು ನಿಮ್ಮನ್ನು ಒಂದು ಒಳ್ಳೆಯ ಕೆಲಸ ಪ್ರೇರೇಪಿಸೀತು.

64. ''ಇನ್ನು ವಿಳಂಬಮಂ ಮಾಡಲಾಗದು''

65. 'ಬೇವಿನ ಫಲಂ ಸ್ವಾದಪ್ಪುದೇ''

66. ''ಧನು ಶರಮೆತ್ತ ನಿನ್ನ ತಪಮೆತ್ತ''

67. ''ಬಿಸಿಲಿನ ಬೇಗೆ ಸುಡಲಿಲ್ಲ''

68. ''ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್.''

69. ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಶಕ್ತಿಗಿಂತ ಯುಕ್ತಿ ಮೇಲು.

— ಅತಿ ಆಸೆ ಗತಿ ಕೆಡಿಸಿತು.

— ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ.

70. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 × 3 = 3

ಅಳುವ ಕಂದನ ತುಟಿಯು ಹವಳದ ಕುಡಿಯಂಗ.

71. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ಭ್ರುಕಟಿ ಪುಟ ರಕ್ತ ನೇತ್ರನ

ನಕಾಲ ಕಾಲೋಗ್ರನಂ ಭಯಂಕರ ದಂಷ್ಟ್ರಾ

---

72. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ನಗು ಮನದಿ______________________________

________________________________________

________________________________________

___________________________________ಮಂಕುತಿಮ್ಮ.

ಅಥವಾ

ಅಲರೊಳಡಗಿದ ಪರಿಮಳದಂತೆ

________________________________________

________________________________________

________________________________________

________________________________________

ಇರಬೇಕಯ್ಯಾ ಯೋಗ, ಎನ್ನ ಅಜಗಣ್ಣ ತಂದೆಯಂತೆ.

73. ಕೆಳಗಿನ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : 1 × 4 = 4

ಎನಲು ಮೆಚ್ಚಿದನುಳಿದ ಭೀಮಾ
ರ್ಜನರ ಹರಣವನಿತ್ತು ನಿಜನಂ
ದನನನಪ್ಪಿದ ನೊಲವಿನಲಿ ಯಮರಾಜನ್ಗೆ ತಂದು
ತನುಜ ಸಾಕಿನ್ನಾಯ್ತು ನಿಮಗೀ
ವನನಿವಾಸವು ಬೀಳುಗೊಂಡು ಮುನಿ
ಜನವ ನಿನ್ನಜ್ಞಾತವಾಸಕೆ ಮನವ ಮಾಡೆಂದ.

________________________________________

________________________________________

________________________________________

________________________________________

________________________________________

________________________________________

________________________________________

________________________________________

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ನಗೆಗೆ ಇರುವ ವಿಷಯ ಅಥವಾ ಸಾಮಗ್ರಿಗಳನ್ನು ಕುರಿತು ಬರೆಯಿರಿ.
— ತಿಪ್ಪೇನಹಳ್ಳಿ ಶಾಲೆಗೆ ಪರಂಗಿ ಟೋಪಿ ಸಾಹೇಬರು ಭೇಟಿ ನೀಡಿದ ಪ್ರಸಂಗವನ್ನು ವಿವರಿಸಿ.
— ಮೊಲ ಸಿಂಹವನ್ನು ಕೊಂದ ಬಗೆಯನ್ನು ತಿಳಿಸಿ.

74.

75.

76. ಕೆಳಗಿನ ಪ್ರಶ್ನೆಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಮಾತೃಭೂಮಿ ಕವಿತೆಯಲ್ಲಿ ಅರವಿಂದ ಮಾಲಗತ್ತಿಯವರು ಭಾರತಮಾತೆಯ ವೈಭವ ವೈಶಿಷ್ಟ್ಯವನ್ನು ಹೇಗೆ ವರ್ಣಿಸಿದ್ದಾರೆ ?

ಅಥವಾ

— ಅಕ್ಕಮಹಾದೇವಿ ವಚನದಲ್ಲಿ ಮೂಡಿಬಂದಿರುವ ಏಕತಾ ಭಾವವನ್ನು ಕುರಿತು ಬರೆಯಿರಿ.

77. — ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಪರ ಊರಿನಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ. $1 \times 5 = 5$

ಅಥವಾ

— ನಿಮ್ಮ ಊರಿಗೆ ಒಂದು ಒಳ್ಳೆಯ ರಸ್ತೆಯನ್ನು ಮಾಡಿಸಿಕೊಡುವಂತೆ ಪಂಚಾಯಿತಿಯ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

78. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ರಾಷ್ಟ್ರೀಯ ಹಬ್ಬಗಳಲ್ಲಿ ಗಣರಾಜ್ಯೋತ್ಸವದ ಪಾತ್ರ

— ಗಣಿ ಕೈಗಾರಿಕೆಯಿಂದ ಪರಿಸರದ ಮೇಲಾಗುವ ಪರಿಣಾಮ

— ಕಂಪ್ಯೂಟರ್